ಶ್ರೀ ಎಸ್. ಎಂ. ಆಡ್ಯಂತಾಯ.—ಅವರು ಹಾರಿಕೆ ಉತ್ತರ ಕೊಟ್ಟಿದ್ದಾರೆ, ಆದ್ದರಿಂದ ಹಾರಿಕೆ ಪ್ರಶ್ನೆ ಎಂದು ಹೇಳಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಖಾರ್ಗೆಯವರು ರೋಸ್ಟರ್ ಸಿಸ್ಟಂ ಬಗ್ಗೆ ಹೇಳಿದ್ದಾರೆ. ರೋಸ್ಟರ್ ಸಿಸ್ಟಮನ್ನು ಅಳವಡಿಸಿಕೊಳ್ಳಲಿಕ್ಕೆ ಕಷ್ಟವಾಗುತ್ತದೆ. ರೋಸ್ಟರ್ ಸಿಸ್ಟಂ ಪ್ರಕಾರ ತೆಗೆದುಕೊಂಡಿದ್ದೇವೆ. ಅನ್ ಎಂಪ್ಲಾಯ್ ಆಗಿದ್ದಾರೆ ಅವರೆಲ್ಲರಿಗೂ ಕೆಲಸ ಕೊಡುವುದು ಕಷ್ಟವಾಗುತ್ತದೆ. ಆದರಿಂದ ನಾವು ಇವರಿಗೆ ಅನ್ಯಾಯವಾಗುತ್ತದೆ ಎನ್ನುವ ದೃಷ್ಟಿಯಿಂದ ಏಜ್. ಕ್ವಾಲಿಫಿಕೇಷನ್ ಪ್ರತಿಯೊಂದನ್ನು ರಿಲ್ಯಾಕ್ಸ್ ಮಾಡಿ ನಿಜವಾಗಿ ಯಾರು ಅನ್ ಎಂಪ್ಲಾಯ್ಡ್ ಆಗಿದ್ದಾರೆ ಅವರೆಲ್ಲರನ್ನೂ ತೆಗೆದುಕೊಳ್ಳುವುದಕ್ಕೆ ಸಾರಿಗೆ ಸಂಸ್ಥೆಗೆ ಆದೇಶವನ್ನು ಕೊಟ್ಟಿದ್ದೇವೆ. ಸಾರಿಗೆ ಸಂಸ್ಥೆ ರೋಸ್ಟರ್ ಸಿಸ್ಟಂ ಫಾಲೋ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದಲ್ಲಿ ಡ್ರೈವರ್ಸ್ ಕಡಿಮೆ ಇದ್ದರು. ಅದಕ್ಕೋಸ್ಕರ ೩ ತಿಂಗಳಲ್ಲಿ ೫೦೦ ಜನರನ್ನು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡತಕ್ಕಂಥ ಕ್ರಮವನ್ನು ಈಗಾಗಲೇ ನಾವು ತೆಗೆದುಕೊಂಡಿದ್ದೇವೆ.

ಶ್ರೀ ಎ. ಮಲ್ಲಿಕಾರ್ಜುನ ಖಾರ್ಗೆ.—ಇದು ಬಹಳ ಮುಖ್ಯವಾದದು. ಸ್ವಲ್ಪ ಮನಸ್ಸು ಮಾಡಿದರೆ ನ್ಯಾಯ ಸಿಗತಕ್ಕ ದೃಷ್ಟಿಯಿಂದ ಕೇಳುತ್ತಾ ಇದ್ದೇನೆ. ನೀವು ೫೦೦ ಜನರನ್ನು ರೆಕ್ರೂಟ್ ಮಾಡುತ್ತೀರಿ...

ಶ್ರೀ ಪಿ. ಜಿ ಆರ್. ಸಿಂಧ್ಯ.—ಆ ಭಾಗದ ಶಾಸಕರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇನೆ.

ಸರ್ಕಾರದ ಮೇಲೆ, ಮತ್ತು ಸಾರಿಗೆ ಸಂಸ್ಥೆ ಮೇಲೆ ಲೋಪದೋಷಗಳಾಗಿವೆ ಎನ್ನತಕ್ಕಂಥ ಆಪಾದನೆ ಬರತಕ್ಕಂಥಾದ್ದು ಬೇಕಾಗಿಲ್ಲ. ಆ ಭಾಗದ ಶಾಸಕರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇನೆ ಸಮಿತಿ ಸಭೆ ಸೇರಿಲ್ಲ. ಇವತ್ತಿನಿಂದ ಕೆಲಸವನ್ನು ಪ್ರಾರಂಭ ಮಾಡುತ್ತಾ ಇದ್ದಾರೆ. ಅವರ ಸಲಹೆಯನ್ನು ಪಡೆದುಕೊಳ್ಳುತ್ತೇನೆ.

ಶ್ರೀ ಎ. ಮಲ್ಲಿಕಾರ್ಜುನ ಖಾರ್ಗೆ.—ಶಾಸಕರ ಅಭಿಪ್ರಾಯವನ್ನು ತೆಗೆದುಕೊಳ್ಳಿ. ಕಾನೂನಿನಲ್ಲಿ ರತಕ್ಕಂಥ ರಕ್ಷಣೆಯನ್ನು ಯಾವರೀತಿ ಕೊಡಬೇಕೋ ಆ ರೀತಿ ಕೊಡಬೇಕಾಗುತ್ತದೆ ಬರೀ ಅವರ ಅಭಿಪ್ರಾಯದ ಪ್ರಕಾರ ಹೋಗುವುದಕ್ಕಾಗುವುದಿಲ್ಲ. ಕಾನೂನಿಗ ವಿರುದ್ಧವಾಗಿ ಅಭಿಪ್ರಾಯ ಕೊಟ್ಟರೆ ಅದರಂತೆ ಮಾಡುವುದಕ್ಕಾಗುವುದಿಲ್ಲ. ಇನ್ ಫ್ಯೂಚರ್ ೫೦೦ ಜನರನ್ನು ರೆಕ್ರೂಟ್ ಮಾಡುತ್ತೀರಿ ಎಂದು ತಿಳಿದುಕೊಳ್ಳಿ. To fill up the backlog why should you not go in for special Recruitment ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದಕ್ಕೆ ಒಪ್ಪಿದ್ದೇನೆ.

ಪ್ರಶ್ನೆ ೩೩೦ (೧೧೨೬)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿ

೧೧೨೬. ಶ್ರೀ ಇದಿನಬ್ಬ.(ಉಳ್ಳಾಲ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಇರುವ ನ್ಯಾಯಬೆಲೆ ಅಂಗಡಿಗಳೆಷ್ಟು ?

ಆ) ಇದರಲ್ಲಿ ಖಾಸಗಿಯವರ ಸಂಖ್ಯೆ ಎಷ್ಟು , ಸಹಕಾರಿ ಸಂಘ ಸಂಸ್ಥೆಗಳು ನಡೆಯುವಂತಾದ್ದು ಎಷ್ಟು ?

ಇ) ಈ ನ್ಯಾಯಬೆಲೆಯ ಅಂಗಡಿಗಳಲ್ಲಿ ಗ್ರಾಹಕರಿಗೆ ಸರಿಯಾದ ಆಹಾರ ಸರಬರಾಜು ಪದಾರ್ಥಗಳನ್ನು ಮಾಡದಿರುವ ಪ್ರಕರಣಗಳೇನಾದರೂ ಇವೆಯೇ, ಇದ್ದರೆ ಅವುಗಳ ಸಂಖ್ಯೆ ಎಷ್ಟು ಎಲ್ಲೆಲ್ಲಿ

ಈ) ಅಂತಹ ವಂಚನೆ ಪ್ರಕರಣಗಳಿದ್ದಲ್ಲಿ ಅವುಗಳ ಬಗ್ಗೆ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ,

ಉ) ಈ ನ್ಯಾಯಬೆಲೆ ಅಂಗಡಿಗಳ ತಪಾಸಣೆ ಹಾಗೂ ತನಿಖೆಗೆ ಯಾವ ರೀತಿಯ ವ್ಯವಸ್ಥೆ ಗಳಿವೆ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಲಿಖಿತ

ಆ) ಖಾಸಗಿ ಪಿಡಿತ

ಸಹಕಾರಿ ಪಿಡಿತ

ಇ) ಗಮನಕ್ಕೆ ಬಂದಿಲ್ಲ.

ಈ) ಉಪ ಪ್ರಶ್ನೆ 'ಇ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಗ್ರಾಮಾಂತರ ಪ್ರದೇಶದಲ್ಲಿ ಇರುವ ನ್ಯಾಯಬೆಲೆ ಅಂಗಡಿಗಳನ್ನು ತಪಾಸಣೆ ನಡೆಸಲು ಪ್ರತಿ ತಾಲ್ಲೂಕಿಗೆ ಒಬ್ಬರಂತೆ ಆಹಾರ ನಿರೀಕ್ಷಕರನ್ನು ಮತ್ತು ಎರಡು ತಾಲ್ಲೂಕಿಗೆ ಒಬ್ಬರಂತೆ ಒಬ್ಬ ಶಿರಸ್ತೇದಾರರನ್ನೂ ನಿಯೋಜಿತಗೊಳಿಸಲಾಗಿದೆ. ಇದಲ್ಲದೆ ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರು ಜಿಲ್ಲೆಯಲ್ಲಿರುವ ಎಲ್ಲಾ ನ್ಯಾಯ ಬೆಲೆ ಅಂಗಡಿಗಳನ್ನು ತಪಾಸಣೆ ಮಾಡುತ್ತಾರೆ, ಹಾಗೂ ಪ್ರತಿ ತಾಲ್ಲೂಕಿನಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಅಂಗಡಿಗಳನ್ನು ತನಿಖೆ ಮಾಡುತ್ತಾರೆ.

ಜಿಲ್ಲೆಯಲ್ಲಿರುವ ಪಟ್ಟಣ ಹಾಗೂ ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ಕ್ರಮವಾಗಿ ತಹಸೀಲ್ದಾರರು ಹಾಗೂ ಪಡಿತರ ಅಧಿಕಾರಿಗಳ. ಮತ್ತು ಎರಡೂ ಕಡೆ ಆಹಾರ ನಿರೀಕ್ಷಕರು ತಪಾಸಣೆ ಮಾಡುವ ಅಧಿಕಾರಿಗಳಾಗಿರುತ್ತಾರೆ, ಇದಲ್ಲದೇ ಕರ್ನಾಟಕ ಅಗತ್ಯವಸ್ತುಗಳ ಲೈಸನ್ಸ್ (ಆದೇಶ) ೧೯೮೫ರ ಕೆಳಗೆ ತಹಸೀಲ್ದಾರರು ಮತ್ತು ಉರ್ವನಿರ್ದೇಶಕರು(ಆಹಾರ) ಇವರು ಗ್ರಾಮಾಂತರ ಪ್ರದೇಶ ಮತ್ತು ಪಟ್ಟಣ ಪ್ರದೇಶ ಎರಡು ಕಡೆಗಳಲ್ಲಿ ತಪಾಸಣೆ ಮಾಡಬಹುದಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ಇನ್ನು ಮುಂದೆಯೂ ಖಾಸಗಿಯವರಿಗೆ ನ್ಯಾಯ ಬೆಲೆ ಅಂಗಡಿಗಳನ್ನು ಕೊಡುತ್ತೀರಾ ? ಖಾಸಗಿಯವರಿಗೆ ಕೊಡದಿದ್ದರೆ ಮತ್ತೆ ಯಾರಿಗೆ ಕೊಡುವ ನೀತಿಯನ್ನು ಅಳವಡಿಸಿಕೊಂಡಿದ್ದೀರಿ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಈಗ ಪಟ್ಟಣ ಪ್ರದೇಶಗಳಲ್ಲಿ ಖಾಸಗಿಯವರಿಗೆ ಕೊಡ ತಕ್ಕಂಥಾದ್ದನ್ನು ಕಟ್ಟುನಿಟ್ಟಾಗಿ ನಿಲ್ಲಿಸಲಾಗಿದೆ. ಆಲ್ಲಿರತಕ್ಕಂಥ ಸಹಕಾರ ಸಂಘಗಳಿಗೆ ಅಥವಾ ಬಳಕೆ ದಾರರ ಸಂಘದವರಿಗೆ ಕೊಡತಕ್ಕಂಥಾದ್ದನ್ನು ಸರ್ಕಾರದ ನೀತಿಯನ್ನಾಗಿ ಮಾಡಿಕೊಂಡಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ ಗ್ರಾಹಕರಿಗೆ ಸರಿಯಾದ ಆಹಾರ ಪದಾರ್ಥಗಳನ್ನು ಕೊಡದಿರುವ ಪ್ರಕರಣಗಳೇನಾದರೂ ಇವೆಯೇ ಎಂದು ಕೇಳಿದ್ದಕ್ಕೆ ' ಗಮನಕ್ಕೆ ಬಂದಿಲ್ಲ ' ಎಂದು ಹೇಳುತ್ತಾರೆ. ಆದರೆ ಪಾಮೊಲಿನ್ ಎಣ್ಣೆ ಹಾಗೂ ಇನ್ನಿತರ ವಸ್ತುಗಳು ಗ್ರಾಹಕರಿಗೆ ದೊರೆಯದೆ ಅವ್ಯವಹಾರವಾಗಿದೆ ಎನ್ನತಕ್ಕಂಥ ದೂರುಗಳು ಬೇಕಾದಷ್ಟು ಇವೆ. ಇದಕ್ಕೆ ಏನೆನ್ನುತ್ತೀರಿ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರು ನಿರ್ದಿಷ್ಟವಾದ ದೂರುಗಳ ಬಗ್ಗೆ ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.—ಇಡೀ ರಾಜ್ಯದಲ್ಲಿ ತಪಾಸಣೆ ಬಗ್ಗೆ ತಾವು ದೀರ್ಘವಾದ ಉತ್ತರವನ್ನು ಕೊಟ್ಟಿದ್ದೀರಿ. ಆದರೆ ತಾವು ಹೇಳಿದ ಪ್ರಕಾರ ಅಂತಹ ತಪಾಸಣೆ ಆಗಿರುವುದು ಕಂಡುಬಂದಿಲ್ಲ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಗ್ರಾಮಾಂತರ ಪ್ರದೇಶಗಳಲ್ಲಿ. ಪ್ರತಿ ಮಂಡಲ ಪಂಚಾಯತಿ ಪ್ರದೇಶಗಳಲ್ಲಿ ಮತ್ತು ಪ್ರತಿಯೊಂದು ಗ್ರಾಮಕ್ಕೆ ಹೋಗತಕ್ಕಂಥ ಆಹಾರ ಸಾಮಾಗ್ರಿಗಳ ಅಲಾಟ್‌ಮೆಂಟನ್ನು ಪ್ರತಿಯೊಬ್ಬ ಸದಸ್ಯರಿಗೂ ತಿಳುಹಿಸಿಕೊಡಬೇಕೆಂದು ಸೂಚನೆ ಕೊಡುತ್ತಿದ್ದೇನೆ. ಮಾನ್ಯ ಸದಸ್ಯರಿಗೂ ಕೂಡ ಅದರ ಪ್ರತಿಯನ್ನು ಕೊಡಬೇಕೆಂದು ಸೂಚಿಸುತ್ತೇನೆ. ಮಾನ್ಯ ಸದಸ್ಯರು ಯಾವುದಾದರೂ ನಿರ್ದಿಷ್ಟವಾದ ಪ್ರಕರಣದ ಬಗ್ಗೆ ಹೇಳಿದರೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯನ್ನು ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಈಗಾಗಲೇ ಮುಗಿದಿದೆ. ತಾವು ರೂಲ್ಸ್ ತೆಗೆದುಕೊಂಡು ನೋಡಿ.

"When all the questions for which oral answers are desired have been called, the Speaker, may, if time permit-scall again any question which has not been asked by reason of the abse' ce of the member in whose name it stands and may also permit a member to ask a question standing in the name of another member, if so authorised".

(ಗೊಂದಲ)

ಅಧ್ಯಕ್ಷರು.—ನೀವು ಶ್ರೀ ಬಸವಲಿಂಗಪ್ಪನವರು ಯಾರಿಗೂ ಅಥರೈಸ್ ಮಾಡಿಲ್ಲ, ನೀವು ನಾನಿ ಕರೆದಾಗ ಇರಲಿಲ್ಲ, ಈಗಾಗಲೇ ಪ್ರಶ್ನೋತ್ತರ ವೇಳೆ ಮುಗಿದಿದೆ.

(ಗೊಂದಲ)

ಅಧ್ಯಕ್ಷರು.—ನಾನು ಒಂದು ಬುಲೆಟಿನ್‌ನನ್ನು ಇಷ್ಯೂ ಮಾಡಿದ್ದೇನೆ. ಈ ಸಭೆಗೆ ಯಾರಾದರೂ ಸದಸ್ಯರು ಗೈರು ಹಾಜರಾದರೆ, ಅದರ ಬಗ್ಗೆ ಉತ್ತರ ರೆಡಿ ಇದ್ದರೆ, ಅವರಿಗೆ ಉತ್ತರವನ್ನು ಕಳುಹಿಸಿ ಕೊಡುವ ವ್ಯವಸ್ಥೆ ಮಾಡುತ್ತೇನೆ. If you are ignorant of law, I cannot help it.

SRI M. MALLIKARJUNA KHARGE —If you mind you can help.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತರಗಳು
ಬೆಂಡಿಗೇರಿಯಂ ದಲಿತ ಯುವಕನಿಗೆ ಮಂಲ ತಿನ್ನಿಸುವ ಪ್ರಕರಣ

೧೩೨೫. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಡಿಗೇರಿಯಂ ದಲಿತ ಯುವಕನಿಗೆ ಮಲ ತಿನ್ನಿಸುವ ಪ್ರಕರಣದಲ್ಲಿ ಭಾಗಿಯಾಗಿದ್ದವರ ಸಂಖ್ಯೆ ಎಷ್ಟು ?

ಆ) ಈ ಪ್ರಕರಣದಲ್ಲಿ ಸರ್ಕಾರಿ ನೌಕರರು ಭಾಗಿಯಾಗಿದ್ದರೆ, ಅವರ ಸಂಖ್ಯೆ ಎಷ್ಟು ?

ಇ) ಸರ್ಕಾರಿ ನೌಕರರೇನಾದರೂ ಭಾಗಿಯಾಗಿದ್ದಲ್ಲಿ ಭಾರತೀಯ ಸಂವಿಧಾನದ ಪರಿಚ್ಛೇದ ೩೧೧ ರಂತೆ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪಿನ ಪ್ರಕಾರ ಅವರನ್ನು ಕಡ್ಡಾಯ ನಿವೃತ್ತಿ, ಗೊಳಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ೧೩

ಆ) ಮೂವರು ಸರ್ಕಾರಿ ನೌಕರರು ಭಾಗಿಯಾಗಿದ್ದರು.

ಇ) ಆಪಾದಿತ ಮೂವರು ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿಡಲಾಗಿದ್ದು ಈ ಮೊಕದ್ದಮೆಯು ಬೆಳಗಾವಿಯ ಸೀನಿಯರ್ ಜೆ. ಎಂ. ಎಫ್. ಸಿ. ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ನ್ಯಾಯಾಲಯದ ತೀರ್ಪಿನಲ್ಲಿ ತಪ್ಪಿತಸ್ಥರೆಂದು ಕಂಡು ಬರುವ ಸರ್ಕಾರಿ ನೌಕರರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.